ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

32 ಸಚಿವರು -

ಇಲಾಖೆ / ವಿಷಯ : DEPARTMENT / SUBJECT: ಸಿಡಿ - ...

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE 25/3/21

### 225 ಶಾಸಕರ 'ಶೀಲ' ಶಂಕಿಸಿದ ಸುಧಾಕರ್? • ಸಿ.ಎಂ, ಸಭಾಧ್ಯಕ್ಷರಿಗೆ ದೂರು

# 'ಏಕ ಪತ್ನಿ ವ್ರತಸ್ಥ': ಬಿರುಗಾಳಿ

25-3-2021

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೆ.ಆರ್. ರಮೇಶ್‌ಕುಮಾರ್, ವಿ.ಮುನಿಯಪ್ಪ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಸತ್ಯ ಹರಿಶ್ಚಂದ್ರರಾ? ಇವರೆಲ್ಲಾ ಏಕಪತ್ನಿ ವ್ರತ ಮಾಡ್ತಾರಾ? ನಾನೂ ಸೇರಿ 225 ಶಾಸಕರ ವೈಯಕ್ತಿಕ ಜೀವನದ ಬಗ್ಗೆ ತನಿಖೆ ಆಗಲಿ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ನೀಡಿದ ಹೇಳಿಕೆ ರಾಜಕೀಯ ಬಿರುಗಾಳಿ ಎಬ್ಬಿಸಿದೆ.

ಈ ಬೆನ್ನಲ್ಲೇ ಎಚ್ಚೆತ್ತ ಸುಧಾಕರ್ ಸಂಜೆ ಸರಣಿ ಟ್ವೀಟ್ ಮಾಡಿ, 'ಆರು ಸಚಿವರ ವಿರುದ್ಧ ನಿರಂತರ ತೇಜೋವಧೆಯಿಂದ ನಮಗಾದ ಅಪಮಾನ, ನೋವು ಯಾರಿಗೂ ಅರಿವಾಗಲಿಲ್ಲ. ನಾನು ನೀಡಿರುವ ಹೇಳಿಕೆಯನ್ನು ಶಬ್ದಶಃ ಅರ್ಥೈಸದೇ ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ' ಎಂದು ಹೇಳಿದ್ದಾರೆ.

ಸುಧಾಕರ್ ಹೇಳಿಕೆ ಮಧ್ಯಾಹ್ನ ಸದ್ದು ಮಾಡುತ್ತಿದ್ದಂತೆ, ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ ವಿರೋಧ ಪಕ್ಷಗಳ ಸದಸ್ಯರು ಸುಧಾಕರ್ ರಾಜೀನಾಮೆಗೂ ಆಗ್ರಹಿಸಿದರು. ಈ ಸಂಬಂಧ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ದೂರು ನೀಡಿದ ಕಾಂಗ್ರೆಸ್, ಕ್ರಮಕೈಗೊಳ್ಳಲು ಆಗ್ರಹಿಸಿದೆ.

> ಸುಧಾಕರ್ ನುಡಿಮುತ್ತುಗಳನ್ನು ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಸದನದಲ್ಲಿ ಚರ್ಚೆ ನಡೆಯಲಿ. ನನಗಿರುವುದು ಒಬ್ಬಳೇ ಹೆಂಡತಿ, ಒಂದೇ ಸಂಸಾರ
>
> **ಡಿ.ಕೆ. ಶಿವಕುಮಾರ್**, ಕೆಪಿಸಿಸಿ ಅಧ್ಯಕ್ಷ

> ಇವರದು 'ಗಿಲ್ಟಿ ಮೈಂಡ್', ಸ್ಟುಪಿಡ್ ಹೇಳಿಕೆ. ಎಲ್ಲರೂ ಏಕ ಪತ್ನಿ ವ್ರತಸ್ಥರೇ, ಇಬ್ಬರನ್ನು ಮದುವೆ ಆಗಲು ಕಾನೂನಿನಲ್ಲಿ ಅವಕಾಶ ಇಲ್ಲ
>
> **ಸಿದ್ದರಾಮಯ್ಯ**, ವಿರೋಧ ಪಕ್ಷದ ನಾಯಕ

ಬುಧವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ, ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಧರಣಿ ಮುಂದುವರಿಸಿದರು. ಭೋಜನ ವಿರಾಮದ ಬಳಿಕ ಸುಧಾಕರ್ ಹೇಳಿಕೆ ಪ್ರಸ್ತಾಪಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸುಧಾಕರ್ ಅವರನ್ನು ಸಮರ್ಥಿಸಿದ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, 'ಸಚಿವರು ಹೊರಗೆ ಮಾಧ್ಯಮದ ಬಳಿ ಮಾತನಾಡಿದ್ದಾರೆ. ಅವರು ಯಾವ ಸಂದರ್ಭ ಮತ್ತು ಅರ್ಥದಲ್ಲಿ ಮಾತನಾಡಿದ್ದಾರೆ ಎಂಬುದನ್ನು ಪರಿಶೀಲಿಸಬೇಕು.

## ಸಚಿವ ಸುಧಾಕರ್ ಹೇಳಿದ್ದೇನು

'ನಾವು ಮರ್ಯಾದಾ ಪುರುಷೋತ್ತಮರು, ಶ್ರೀರಾಮಚಂದ್ರರು ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಮಾತಾಡ್ತಾ ಇದ್ದಾರೆ. ಇವರಿಗೆ ಸವಾಲು ಹಾಕುತ್ತೇನೆ, 225 ಶಾಸಕರ ಬಗ್ಗೆ ತನಿಖೆ ಆಗಲಿ, ನಿಮ್ಮ ನಿಮ್ಮ ಜೀವನದಲ್ಲಿ (ನಾನೂ [redacted] ಸಂಬಂಧ ಇಟ್ಟುಕೊಂಡಿಲ್ಲ ಎನ್ನುವುದನ್ನು [redacted] ಸವಾಲು ಹಾಕಿದರು. [redacted] ತ್ತೇನೆ' ಎಂದು ಹೇಳಿದರು.

ಸದನದಲ್ಲಿ ನೀವು ಕೂಡ ಸಚಿವರ ಚಾರಿತ್ರ್ಯಕ್ಕೆ ಧಕ್ಕೆ ಬರುವಂತೆ ಮಾತನಾಡಲಿಲ್ಲವೇ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಮಾತನಾಡಿ, 'ಸುಧಾಕರ್ ಬೇಜವಾಬ್ದಾರಿಯ ಹೇಳಿಕೆ ನೀಡಿದ್ದಾರೆ. ನನ್ನ, ಕೆ.ಆರ್. ರಮೇಶ್‌ಕುಮಾರ್, ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಅವರ ಹೆಸರುಗಳನ್ನು ಪ್ರಸ್ತಾಪಿಸಿದ್ದಾರೆ. 225 ಶಾಸಕರು ಸತ್ಯ ಹರಿಶ್ಚಂದ್ರರಲ್ಲ ಎಂದಿದ್ದಾರೆ. ಇದು ಅವರ ಅಪರಾಧಿ ಪ್ರಜ್ಞೆಗೆ ಸಾಕ್ಷಿ' ಎಂದು ಗುಡುಗಿದರು.

'ಮುಖ್ಯಮಂತ್ರಿ ಸೇರಿ ಎಲ್ಲರ ಬಗ್ಗೆಯೂ ತನಿಖೆ ನಡೆಯಲಿ. ಈ ರೀತಿ ಹೇಳಿಕೆ ನೀಡಿದ ಸುಧಾಕರ್ ರಾಜೀನಾಮೆ ನೀಡಬೇಕು. ಇವರ ಪ್ರಕಾರ ಎಲ್ಲ ಶಾಸಕರೂ ವ್ಯಭಿಚಾರಿಗಳಾ? ಮಂತ್ರಿಯ ಹೇಳಿಕೆಯನ್ನು ನೀವೇಕೆ ಸಮರ್ಥಿಸಿಕೊಳ್ಳುತ್ತೀರಿ' ಎಂದು ಬಸವರಾಜ ಬೊಮ್ಮಾಯಿ ವಿರುದ್ಧ ಗರಂ ಆದ ಸಿದ್ದರಾಮಯ್ಯ, 'ಇದು ವ್ಯಭಿಚಾರಿಗಳ ಸರ್ಕಾರ' ಎಂದು ಕಿಡಿಕಾರಿದರು.

ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ, 'ನಾನು 32 ಕ್ಕೂ ಹೆಚ್ಚು ವರ್ಷಗಳಿಂದ ಸದನದಲ್ಲಿದ್ದೇನೆ. ಹಿಂದೆಂದೂ ಯಾರೂ ಈ ರೀತಿ ಮಾತನಾಡಿರಲಿಲ್ಲ. ಇಲ್ಲಿ ಮಹಿಳೆಯರು ಇದ್ದಾರೆ. ಸಾರಾಸಗಟು ಹೀಗೆ ಮಾತನಾಡಿದರೆ ಹೇಗೆ. ಇದರಿಂದ ನನಗೆ ನೋವಾಗಿದೆ' ಎಂದರು.

5ನೇ ಪುಟ ನೋಡಿ

ಇನ್ನೊಂದು ಸುದ್ದಿ 3B

# 'ಏಕ ಪತ್ನಿ ವ್ರತಸ್ಥ': ಬಿರುಗಾಳಿ

25/2/21

ಒಂದನೇ ಪುಟದಿಂದ...

ಸಚಿವ ಸುಧಾಕರ್ ಕ್ಷಮೆ ಕೇಳಬೇಕು ಎಂದು ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಆಗ್ರಹಿಸಿದರು.

ಗದ್ದಲ ಜೋರಾಗುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಕಾಗೇರಿ,'ಯಾರೂ ಭಾವಾವೇಶಕ್ಕೆ ಒಳಗಾಗಿ ಸದಸ್ಯರ ಬಗ್ಗೆ, ಸದನದ ಗೌರವಕ್ಕೆ ಧಕ್ಕೆ ತರುವ ಹಾಗೆ ಮಾತನಾಡಬಾರದು. ನಿಮ್ಮೆಲ್ಲರಿಗೂ ಆದ ನೋವು ನನಗೂ ಆಗಿದೆ' ಎಂದು ಹೇಳಿದರು.

**ಸಿ.ಡಿ ಇರೋದ್ರಿಂದಲೇ ಹೀಗೆ ಆಡ್ತಾರೆ:** ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಅವರ ಸಿ.ಡಿ ಇದೆ. ಅದಕ್ಕಾಗಿಯೇ ಹೀಗೆ ಆಡುತ್ತಿದ್ದಾರೆ. ವಿಲಿ ವಿಲಿ ಒದ್ದಾಡುತ್ತಿದ್ದಾರೆ. ಎಲ್ಲ ಶಾಸಕರ ಬಗ್ಗೆ ತನಿಖೆ ಮಾಡಿ ಎಂದಿದ್ದಾರೆ. ಆದರೆ, ಶಾಸಕರ ಮನೆಯವರು ಏನಂದುಕೊಳ್ಳಬೇಕು' ಎಂದರು.

'ಈ ವಿಚಾರದಲ್ಲಿ ನ್ಯಾಯಾಲಯ ಮೆಟ್ಟಿಲು ಹತ್ತಬೇಕಾ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ನಾವೇನೋ ಗಂಡಸರು. ಹಳ್ಳಿಕಡೆ ಏನೂ ಅನ್ನಲ್ಲ, ಪಾಪ ಹೆಣ್ಣು ಮಕ್ಕಳ (ಶಾಸಕಿಯರು) ಕಥೆ ಏನಾಗಬೇಕು? ಅವರ ಮನೆಯವರಿಗೆ ಅವರು ಏನು ಉತ್ತರ ಕೊಡಬೇಕು' ಎಂದು ಪ್ರಶ್ನಿಸಿದರು.

## ಯಾರೂ ಸತ್ಯ ಹರಿಶ್ಚಂದ್ರರಲ್ಲ: ಎಚ್‌ಡಿಕೆ

'ಇಲ್ಲಿರುವ ಯಾರೂ ಸತ್ಯ ಹರಿಶ್ಚಂದ್ರರಲ್ಲ, ಎಲ್ಲರ ಮನೆಯ ದೋಸೆಯೂ ತೂತು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'224 ಶಾಸಕರು ಮಾತ್ರ ಅಲ್ಲ. ಈ [illegible]ಯ ಮೇಲೆ ಹುಟ್ಟಿದ [illegible]ಗೂ ಸಹಜವಾದ ಕೆಲವು ಪ್ರಕ್ರಿಯೆಗಳು ಇರುತ್ತವೆ' ಎಂದರು.

'ನಾನು ಜೀವನದಲ್ಲಿ ಒಮ್ಮೆ ಎಡವಿದ್ದೇನೆ ಎಂದು ವಿಧಾನಸಭೆಯಲ್ಲೇ ಹೇಳಿದ್ದೇನೆ. ಈಗ ನನ್ನ ಹೆಸರು ಏಕೆ ಎಳೆದು ತಂದಿದ್ದೀರಿ? ಮಂತ್ರಿಗಳೇ ಮಾಡಿಕೊಂಡ ತಪ್ಪು ಇದು. ನ್ಯಾಯಾಲಯಕ್ಕೆ ಹೋಗಿ ಪ್ರತಿಬಂಧಕಾಜ್ಞೆ ಪಡೆಯದಿದ್ದರೆ, ಸರಿಯಾಗಿ ಇದ್ದಿದ್ದರೆ ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ' ಎಂದು ಹೇಳಿದರು.